ಗಮನಸೆಳೆಯುವ ಸೂಚನೆಗಳು

(ಅ) ಕರ್ನಾಟಕ ಕೈಮಗ್ಗ ಅಬಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವ ಬಗ್ಗೆ.

+ ಶ್ರೀ **ರಾಮದಾಸ್ (ಕೃಷ್ಣರಾಜ):** ಮಾನ್ಯ ಉಪಾಧ್ಯಕ್ಷರೇ, ಈ ಸರ್ಕಾರ ಪ್ರಮುಖವಾಗಿ ರೈತರ ಪರವಾದಂತಹ ಹಾಗೂ ನೇಕಾರರ ಪರವಾದಂತಹ ಸರ್ಕಾರ ಎನ್ನುವ ಘೋಷಣೆ ಮುಖಾಂತರ ಏನು ಅಧಿಕಾರಕ್ಕೆ ಬಂದ ಮೇಲೆ ವಿಶೇಷವಾಗಿ 1994-95ನೇ ಸಾಲಿನಲ್ಲಿ ನೇಕಾರರಿಗೊಸ್ಕರ ನೂಲನ್ನು ಕೊಂಡುಕೊಂಡು ಅಲ್ಲಿರುವ ನೌಕರರಿಗೆ ಕೊಡುವುದಕ್ಕೊಸ್ಕರ 18 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು. 1994-95ನೇ ಸಾಲಿನಲ್ಲಿ ಈ ವಿಚಾರದಲ್ಲಿ ಕರ್ನಾಟಕ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಆಗಿರುವಂತಹ ಅವ್ಯವಹಾರಗಳ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಅದಕ್ಕೆ ಕಾಲಾವಕಾಶವನ್ನು ಕೇಳಿದ್ದೇನೆ, ಉತ್ತರವನ್ನು ನಾಳೆ ಅಥವಾ ನಾಡಿದ್ದು ಕೊಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದು ನಂತರ ಆದೇಶ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತಾರೆ.

(ಆ) ಈಶಾನ್ಯ ರಾಜ್ಯಗಳಿಂದ ಸರಬರಾಜಾಗುತ್ತಿದ್ದ ಬಿದಿರು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ನಿಂತು ಹೋಗಿರುವುದರಿಂದ ರಾಜ್ಯದ ಅಗರಬತ್ತಿ ತಯಾರಿಕರಿಗೆ ಉಂಟಾಗುತ್ತಿರುವ ತೊಂದರೆ ಬಗ್ಗೆ.

ಶ್ರೀ ಡಿ. ಮಾರುತಿರಾವ್ ಪವಾರ (ನರಸಿಂಹರಾಜ): ಮಾನ್ಯ ಉಪಾಧ್ಯಕ್ಷರೇ, ಈಶಾನ್ಯ ರಾಜ್ಯಗಳಿಂದ ಸರಬರಾಜಾಗುತ್ತಿದ್ದ ಬಿದಿರು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ನಿಂತು ಹೋಗಿರುವುದರಿಂದ ರಾಜ್ಯದ ಅಗರಬತ್ತಿ ತಯಾರಿಕರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೈ. ರಾಮಕೃಷ್ಣ: ಮಾನ್ಯ ಉಪಾಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ಸುಮಾರು 10 ಲಕ್ಷ ಜನ ಊದುಬತ್ತಿ ಕೈಗಾರಿಕೆಯಲ್ಲಿ ಯಾರು ನಿರತರಾಗಿದ್ದರು ಬಡವರು ಅವರ ಹೊಟ್ಟೆ ಮೇಲೆ ಹೊಡೆಯತಕ್ಕಂಥ ಕೆಲಸವಾಗಿದೆ. ಅದಕ್ಕೆ ಒಂದು ಸೂಚನೆ ಇದೆ. ಅದನ್ನು ಗಮನಕ್ಕೆ ತರುತ್ತೇನೆ. ಅದು ಜಡ್ಜ್‌ಮೆಂಟ್ ಆಗಿರತಕ್ಕಂಥಾದ್ದು. ಅವರು ಉತ್ತರ ಕೊಟ್ಟರೆ ಸಾಕು.

ಉಪಾಧ್ಯಕ್ಷರು: ಈಗ ಮಾನ್ಯ ಸದಸ್ಯರು ಗಮನ ಸೆಳೆದ ನಂತರ ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ವೈ. ರಾಮಕೃಷ್ಣ: ಸ್ಟೇಟ್‌ಮೆಂಟ್ ಆದಮೇಲೆ ನನಗೆ ಅವಕಾಶ ಕೊಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ ಉತ್ತರವನ್ನು ನೀಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಶೇಕಡ 30 ರಷ್ಟು ಜನ ಅಗರಬತ್ತಿ ಉತ್ಪಾದನೆ ಮಾಡುವವರು ಇದ್ದಾರೆ. ಇಲ್ಲಿ ಆಗಿರುವುದೇನೆಂದರೆ ಬಿದುರನ್ನು ಪೂರ್ತಿಯಾಗಿ ಸರಬರಾಜು ಮಾಡತಕ್ಕಂಥ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಈಶಾನ್ಯ ರಾಜ್ಯಗಳಿಂದ ಬಿದಿರು ಬರಬೇಕಾಗುತ್ತದೆ. ನಾವು ಕೇವಲ ಶೇಕಡ 10 ರಷ್ಟು ಬಿದಿರನ್ನು ಮೇವಾರ ಜನರಿಗೆ ಕೊಡುತ್ತೇವೆ. ಅದರಲ್ಲಿ ಸ್ವಲ್ಪ ಜನ ಬುಟ್ಟಿ ನೇಯ್ದು, ಸ್ವಲ್ಪ ಜನ ಅಗರಬತ್ತಿ ಮಾಡಿಕೊಳ್ಳುತ್ತಾರೆ. ಶೇಕಡ 90 ರಷ್ಟು ಬಿದಿರು ಈಶಾನ್ಯ ರಾಜ್ಯದ ಅಸ್ಸಾಂನಿಂದ ಹೆಚ್ಚಿನ ಪ್ರಮಾಣದಲ್ಲಿ ಅಗರಬತ್ತಿ ಮಾಡುವುದಕ್ಕೆ ತರುತ್ತಾರೆ. ಆದರೆ ಹೇಗೆ ಏನಾಗಿದೆಯೆಂದರೆ ಸುಪ್ರೀಂ ಕೋರ್ಟ್ ಆದೇಶವಾದ ಮೇಲೆ ಬಿದಿರು ಬರುವುದು ನಿಂತಿದ್ದು, ಅಸ್ಸಾಂನಲ್ಲಿ ಎಲ್ಲಾ ಲಾರಿ, ಟ್ರಕ್ಸ್ ಹಾಗೆ ನಿಂತಿವೆ. ಬಿದಿರನ್ನು ಹೊರಗೆ ಬಿಡುತ್ತಿಲ್ಲ. ಆದುದರಿಂದ ಇದು ಸಮಸ್ಯೆಯಾಗಿದ್ದು ನಿಜ. ಆದುದರಿಂದ ಅಗರಬತ್ತಿ ಉತ್ಪಾದಕರ ಸಂಘದವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಅಗರಬತ್ತಿ ಉತ್ಪಾದನೆಗೆ ಬೇಕಾದಂತಹ ಬಿದಿರು ನಮ್ಮಲ್ಲಿ ಇಲ್ಲ. ನಮ್ಮಲ್ಲಿ ಇರತಕ್ಕಂಥ 38,000 ಚದರ ಕಿಲೋಮೀಟರ್ ಅರಣ್ಯದಲ್ಲಿ 6,400 ವೈಲ್ಡ್ ಲೈಫ್‌ಗೆ ಬರುತ್ತದೆ. ಅದರಲ್ಲಿ ಬಿದಿರು ಬೇಕಾದಷ್ಟು ಬರುತ್ತದೆ. ಆದುದರಿಂದ ಬಿದಿರನ್ನು ಕಡಿಯುವ ಹಾಗಿಲ್ಲ. ಶಿವಮೊಗ್ಗ, ಚಿಕ್ಕಮಗಳೂರು ಇಂತಹ ಕಡೆಗಳಲ್ಲಿ ಬಿದಿರನ್ನು ಏನು ಬೆಳೆಯುತ್ತಾರೆ, ಅದನ್ನು ಬೇಕಾದ ಜನರಿಗೆ ಹಸಿ ಬಿದಿರನ್ನು ಕಡಿದು ಅವರಿಗೆ ಸಾಗಣೆ ಮಾಡಿ ಅವರ ಉಪಜೀವನ ಆಗತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಆದರೆ ತೊಂದರೆ ಆಗಿರುವುದು ಸುಪ್ರಿಂ ಕೋರ್ಟ್ ತೀರ್ಪಿನಿಂದ. ಅದರಿಂದ ಅಸ್ಸಾಂನಲ್ಲಿ ಬಿದಿರು ಸಾಗಣೆಯನ್ನು ನಿಲ್ಲಿಸಿಬಿಟ್ಟಿದ್ದಾರೆ. ಆದುದರಿಂದ ಸಂಘದವರೆ ಕೋರ್ಟಿಗೆ ಅರ್ಜಿ ಸಲ್ಲಿಸಬೇಕು. ಇನ್ನೊಂದು ವಿಚಾರವೇನೆಂದರೆ ನಾವೂ ಕೂಡ ನಮ್ಮ ಅರಣ್ಯ ಇಲಾಖಾ ವತಿಯಿಂದ ಸಮಿತಿಯನ್ನು ಮಾಡಿದ್ದೇನೆ. ಆ ಸಮಿತಿಯ ಮಧ್ಯಂತರ ವರದಿ ಬಂದಿದೆ. ಅದರ ಪೂರ್ತಿ ರಿಪೋರ್ಟ್ ಆದ ಮೇಲೆ ನಾವು ಅದನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸುತ್ತೇವೆ.

ಶ್ರೀ ವೈ. ರಾಮಕೃಷ್ಣ: ಈಗ ನಮ್ಮಲ್ಲಿ ಬೊಂಬುಗಳು ಇಲ್ಲ ಒಪ್ಪಿಕೊಳ್ಳುತ್ತೇನೆ. ಆದರೆ ಅಗರಬತ್ತಿಯಲ್ಲಿ ಕೆಲಸ ಮಾಜತಕ್ಕಂಥ ಲಕ್ಷಾಂತರ ಜನರಿದ್ದಾರೆ ಅವರ ಬಂದು ದೃಷ್ಟಿಯಿಂದ ನಾರು ಮಾಡಬೇಕಾಗಿರತಕ್ಕಂಥ ಕೆಲಸ ಏನು ಎಂಬುದನ್ನು ಒಂದು ನಿಮಿಷದಲ್ಲಿ ಹೇಳುತ್ತೇನೆ. ಜಡ್ಜ್‌ಮೆಂಟನ್ನು ನಾನು ನೋಡಿದ್ದೇನೆ, ಅದನ್ನು ಪೂರ್ತಿಯಾಗಿ ಓದಿದ್ದೇನೆ. ಸನ್ಮಾನ್ಯ ಜೆ.ಎಸ್. ವರ್ಮಾರವರು ಹಾಗೂ ನ್ಯಾಯಮೂರ್ತಿ ವಿ.ಎಸ್.ಕಿರಣ್‌ರವರು 19ನೇ ತಾರೀಖು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ, 700 ಲಾರಿಗಳು ಇವ್ವತ್ತಿನ ದಿವಸ ಬೊಂಬು ತುಂಬಿಕೊಂಡು ಅಲ್ಲಿ ನಿಂತಿದ್ದಾರೆ. ಈಗ ಜಡ್ಜ್‌ಮೆಂಟಿನಲ್ಲಿ ಏನು ಹೇಳಿದ್ದಾರೆಂದರೆ ಯಾವ ಯಾವ ರಾಜ್ಯಗಳು ಏನೇನು ಮಾಡಬೇಕೆಂದು ನಿರ್ದೇಶನ ಕೊಟ್ಟಿದ್ದಾರೆ. ಜಮ್ಮು ಕಾಶ್ಮೀರದವರು ಏನು ಮಾಡಬೇಕು, ಪಶ್ಚಿಮ ಬಂಗಾಳದವರು ಏನು ಮಾಡಬೇಕು, ಉತ್ತರಪ್ರದೇಶದವರು ಏನು ಮಾಡಬೇಕು ಮತ್ತು ಉಳಿದವರು ಏನು ಮಾಡಬೇಕು ಎಂಬ ಬಗ್ಗೆ ನಿರ್ದೇಶನ ಕೊಟ್ಟಿದ್ದಾರೆ. ಅವರ ನಿರ್ದೇಶನ ಏನು ಎಂದು ಹೇಳಿದರೆ ಕಮಿಟಿಯನ್ನು ರಚನೆ ಮಾಡಬೇಕು ಎಂದು. ಮೂರು ಕಮಿಟಿಗಳನ್ನು ರಚನೆ ಮಾಡಬೇಕು. ಇದನ್ನೆಲ್ಲ ಪರಿಶೀಲನೆ ಮಾಡಬೇಕು ಮತ್ತು ಅವರಿಗೆ ಲೆಕ್ಕ ಕೊಡಬೇಕೆಂದು ಹೇಳಿದ್ದಾರೆ. ಈಗ

ನೀವೇನು ಕಮಿಟಿ ರಚನೆ ಮಾಡುತ್ತೀರೋ ಆ ಕಮಿಟಿಯೊಳಗೆ ಡೆಫನೇಷನ್ 2 ಏನಿದೆ ನೋಡಿ, ಅದರಲ್ಲಿ ಏನಿದೆಯೆಂದರೆ, ಕಸಗುಡಿಸತಕ್ಕಂಥ ಹುಲ್ಲಿಕಡ್ಡಿ, ಎಲೆಗಳು ಮತ್ತು ಬೆತ್ತ ಹಾಗೂ ಬೊಂಬು ಇದೆಲ್ಲಾ ಹುಲ್ಲಿನಜಾತಿಗೆ ಸೇರಿದವು ಮರದ ಜಾತಿಗೆ ಸೇರಿದವಲ್ಲ ಆದ್ದರಿಂದ ಇದಕ್ಕೆ ನೀರು ವಿನಾಯಿತಿಯನ್ನು ಕೊಡಬೇಕೆಂದು ಹೇಳಿಬಿಟ್ಟು ಈ ಅಮೆಂಡ್‌ಮೆಂಟ್ ಆಫ್ ದಿ ಡೆಫನೇಷನ್ ಅಷ್ಟನ್ನು ನೀವು ನಿಮ್ಮ ಕಮಿಟಿಯೊಳಗೆ ಮಾಡಿಸಿಕೊಟ್ಟರೆ, ಅದು ಕೇಂದ್ರ ಸರ್ಕಾರಕ್ಕೆ ಏನಾದರೂ ತಲುಪಿದ್ದೇ ಆದರೆ ಬಹುಶ ನಮ್ಮ ಕರ್ನಾಟಕ ಸರ್ಕಾರ ಮಾಡಬೇಕಾಗಿರುವ ಕೆಲಸ ಅಷ್ಟೇ ಎಂದು ನಾನು ಭಾವಿಸಿಕೊಂಡಿದ್ದೇನೆ. ಅದಕ್ಕೊಸ್ಕರವಾಗಿ I will read the definition clause "Tree includes plams, bemboo, stupms, brush-wood and canes" ಈ ವಿಚಾರದಲ್ಲಿ ತಾವು ಸ್ವಲ್ಪ ಮನಸ್ಸಿಗೆ ಹಾಕಿಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಇದನ್ನು ಕೈಬಿಡಿಸಿಬಿಟ್ಟರೆ ಸಾಕು ದಯವಿಟ್ಟು ಅಷ್ಟಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಮಾರುತಿರಾವ್ ಪವಾರ್: ಈಗಾಗಲೇ ಅವರು ಹೇಳಿದ್ದಾರೆ ಉದ್ದಿಮೆದಾರರ ಸಂಘದವರು ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬೇಕು ಎಂಬ ಮಾತನ್ನು ಹೇಳಿದ್ದಾರೆ. ಇವತ್ತು 10 ಲಕ್ಷ ಜನ ಕಾರ್ಮಿಕರು ರಾಜ್ಯದಲ್ಲಿ ಈ ಒಂದು ಅಗರಬತ್ತಿ ಉದ್ದಿಮೆಯಲ್ಲಿ ಇದ್ದಾರೆ ಎನ್ನುವುದಾದರೆ ಅವರ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ನಮ್ಮ ಸರ್ಕಾರದ್ದೂ ಆಗುತ್ತದೆ. ಇವತ್ತು ನಾವು ಉದ್ದಿಮೆದಾರರ ಮೇಲೆ ಹಾಕಿಬಿಟ್ಟು ಸರ್ಕಾರ ಕೈಕಟ್ಟಿಕೊಂಡು ಕುಳಿತರೆ ಸರ್ಕಾರದ ಜವಾಬ್ದಾರಿಯಾದರು ಏನು? ಇವೊತ್ತು ಮೈಸೂರು ನಗರದಲ್ಲಿ ಗೋಪಿಕಾ ಅಗರಬತ್ತಿ, ನಾನು ಅಗರಬತ್ತಿ ಅರವಿಂದ ಅಗರಬತ್ತಿ, ಮುಂತಾದ ಕಾರ್ಖಾನೆಗಳಿವೆ. ಇವೊತ್ತು ಇಲ್ಲಿರತಕ್ಕ ಕಾರ್ಮಿಕರಿಗೆ ಕೆಲಸ ಇಲ್ಲದೆ ಬೀದಿಪಾಲಾಗಿದ್ದಾರೆ. ಅವರಿಗೆ ಊಟ ಸಿಗುತ್ತಿಲ್ಲ. ಮತ್ತು ಇದೇ ರೀತಿ ರಾಜ್ಯದಲ್ಲಿ ಹತ್ತು ಲಕ್ಷ ಕಾರ್ಮಿಕರಿದ್ದಾರೆ. ಸರ್ಕಾರ ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಒಂದು ಅರ್ಜಿಯನ್ನು ಸಲ್ಲಿಸಲೇ ಹೋದರೆ ನಮ್ಮ ಕಾರ್ಮಿಕರು ಏನೆಂದು ಕೊಳ್ಳುತ್ತಾರೆ. ಆದ್ದರಿಂದ ದಯಮಾಡಿ ನಾವು ಈ ಉದ್ದಿಮೆದಾರರ ಮೇಲೆ ಹಾಕುವುದಕ್ಕೆ ಬದಲಾಗಿ ಸರ್ಕಾರದಿಂದಲೂ ಸಹ ರಾಜ್ಯದಲ್ಲಿರುವಂಥ ಹತ್ತು ಲಕ್ಷ ಜನ ಕಾರ್ಮಿಕರ ರಕ್ಷಣೆ ಮಾಡಬೇಕು. ತಾವು ಈಶಾನ್ಯ ರಾಜ್ಯಗಳಿಂದ ಬರತಕ್ಕಂಥ ಆ ಬೊಂಬು ಏನಿದೆ, ಬಿದಿರು ಏನಿದೆ ಇಡೀ ದೇಶದಲ್ಲಿ ಇವೊತ್ತು ಕರ್ನಾಟಕರೊಂದರಲ್ಲಿ 35 ಪರ್ಸೆಂಟ್ ಅಗರಬತ್ತಿ ಉತ್ಪಾದನೆ ಆಗುತ್ತದೆ ಇದು ಇಡೀ ದೇಶದಲ್ಲಿ ಈ ಅಗರಬತ್ತಿ ಉದ್ದಿಮೆಯಿಂದಾಗಿ 300 ಕೋಟಿ ರೂಪಾಯಿ ವಹಿವಾಟು ಆಗುತ್ತದೆ. ಅದರಲ್ಲಿ 35 ಪರ್ಸೆಂಟ್ ಇಲ್ಲಿ ಉತ್ಪಾದನೆ ಆಗಬೇಕಾದರೆ ಇದರ ಜವಾಬ್ದಾರಿ ಮತ್ತು ಕಾರ್ಮಿಕರ ರಕ್ಷಣೆ ನಮ್ಮ ಸರ್ಕಾರದ ಜವಾಬ್ದಾರಿಯಾಗುತ್ತದೆ. ಆದ್ದರಿಂದ ದಯಮಾಡಿ ನಾನು ತಮ್ಮ ಮೂಲಕ ಸದನದಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಸರ್ವೋಚ್ಚ ನ್ಯಾಯಾಲಯಕ್ಕೆ ಒಂದು ಅರ್ಜಿಯನ್ನು ಸಲ್ಲಿಸಬೇಕು ಎಂಬ ಮನವಿಯನ್ನು ಈ ಸಂದರ್ಭದಲ್ಲಿ ಮಾಡಬಯಸುತ್ತೇನೆ ಏಕೆಂದರೆ ಕಾರ್ಮಿಕರ ರಕ್ಷಣೆ ಅಗತ್ಯ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು: ಉಪಾಧ್ಯಕ್ಷರೆ ಇದು ಕಾರ್ಮಿಕರ ರಕ್ಷಣೆಯಾದುದರಿಂದ.

ಉಪಾಧ್ಯಕ್ಷರು: ಬಸವರಾಜರವರೆ ತಾವು ಮಾತನಾಡಬಾರದು, ನಾನು ಶ್ರೀ ರಾಮರೆಡ್ಡಿಯವರನ್ನು ಕರೆದಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು: ಒಂದೇ ಒಂದು ಪ್ರಶ್ನೆ ಉಪಾಧ್ಯಕ್ಷರೆ, ಮೇದಾರರು ಬದುಕುತ್ತಾ ಇರುವರು ಬರೀ ಬೊಂಬನ್ನು ನಂಬಿಕೊಂಡು ಮಾತ್ರ. ಆದ್ದರಿಂದ ನನಗೆ ಮಾತನಾಡುವುದಕ್ಕೆ ಒಂದೇ ಒಂದು ನಿಮಿಷ ಅವಕಾಶವನ್ನು ಕೊಡಿ ನಾನೂ ಕೂಡ ಆ ಜನಾಂಗದಿಂದಲೇ ಬಂದಿದ್ದೇನೆ. ಅದು ನನಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಪ್ರತಿಯೊಂದನ್ನು ನ್ಯಾಯಾಲಯಗಳ ಹೆಸರು ಹೇಳಿಬಿಟ್ಟು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ತಪ್ಪಿಸಿಕೊಳ್ಳಲೂಬಾರದು, ಏಕೆಂದರೆ ಆಗರಬತ್ತಿ ತಯಾರು ಮಾಡತಕ್ಕಂಥ ವಿಭಾಗದಲ್ಲಿ 10 ಲಕ್ಷ ಜನ ಕಾರ್ಮಿಕರು ಏನಿದ್ದಾರೆ ಎಂದು ಹೇಳುತ್ತಾರೆ ಅದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಇರತಕ್ಕಂಥದ್ದು. ಅದು ಮುಖ್ಯವಾದಂಥ ಗೃಹ ಕೈಗಾರಿಕೆ. ಆ ಗೃಹ ಕೈಗಾರಿಕೆಯಲ್ಲಿ ಮಹಿಳೆಯರ ಪಾತ್ರ ಬಹಳ ಹೆಚ್ಚಾಗಿದೆ, ಆದುದರಿಂದ ಅವರನ್ನು ರಕ್ಷಣೆ ಮಾಡತಕ್ಕಂಥದ್ದು ಪ್ರಥಮ ಕರ್ತವ್ಯ ಆಗಬೇಕು ಸರ್ಕಾರದ್ದು ನ್ಯಾಯಾಲಯದ ಮೇಲೆ ಹೇಳಿಬಿಟ್ಟು ಅಲ್ಲಿ ಏನೋ ಒಂದು ಕೇಸ್ ಇದೆ ಎಂದು ಹೇಳಿ ತಪ್ಪಿಸಿಕೊಳ್ಳಬಾರದು. ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ ಅದನ್ನು ತೆರವು ಮಾಡಿಸಬೇಕೆಂಬುದು ನನ್ನ ಅಭಿಪ್ರಾಯ.

(ಈ ಹಂತದಲ್ಲಿ ಹಲವಾರು ಸದಸ್ಯರುಗಳು ಒಮ್ಮೆಲೆ ಮಾತನಾಡಲು ಎದ್ದುನಿಂತರು)

ಉಪಾಧ್ಯಕ್ಷರು: ಇದರ ಮೇಲೆ ಎಲ್ಲರೂ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಉಪಾಧ್ಯಕ್ಷರೆ, ಇದು ಮೇವಾರ ಜನಾಂಗದ ಒಂದು ಅಳಿವು-ಉಳಿವು ಪ್ರಶ್ನೆಯಾಗಿದೆ ನಮ್ಮ ಜನಾಂಗದವರು ಬದುಕಬೇಕು ಬಾಳಬೇಕು ಎಂದರೆ ಇದನ್ನೆ ನಂಬಿಕೊಂಡಿದ್ದಾರೆ, ಆದ್ದರಿಂದ ನನಗೆ ಮಾತನಾಡಲು ಒಂದು, ನಿಮಿಷ ಅವಕಾಶ ಕೊಡಬೇಕು. ನಂಬಿಕೊಂಡಿದ್ದಾರೆ, ಆದ್ದರಿಂದ ನನಗೆ ಮಾತನಾಡಲು ಒಂದು ನಿಮಿಷ ಅವಕಾಶ ಕೊಡಬೇಕು.

ಉಪಾಧ್ಯಕ್ಷರು: ಇದರ ಮೇಲೆ ಡಿಬೇಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು: ಇವ್ವೊತ್ತು ಇವರು ಬಿದಿರನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದರೆ ಅಥವಾ ಕಾಯಿದೆಯಿಂದ ತಾವು ಕೊಡುವುದಿಲ್ಲ ಎಂದರೆ ಅವರು ತಮ್ಮ ಬದುಕನ್ನು ಯಾವ ರೀತಿ ಸಾಗಿಸಬೇಕಾಗುತ್ತದೆ? ಇವರು ಮರ, ಬುಟ್ಟಿ ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಆದ್ದರಿಂದ ನನಗೆ ಮಾತನಾಡುವುದಕ್ಕೆ ಒಂದೇ ಒಂದು ನಿಮಿಷ ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ, ಆ ರೀತಿ ಮಾತನಾಡಿದರೆ ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ನಾನು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ, ಸರ್ಕಾರ ಇದರಲ್ಲಿ ಸುಣ್ಣಚಿಕೊಳ್ಳಬೇಕು, ಓಡಿಹೋಗಬೇಕು ಎಂಬ ಪ್ರಶ್ನೆ ಇಲ್ಲ. ಸುಪ್ರೀಂಕೋರ್ಟ್ ಆದೇಶ ಇದ್ದಾಗ ನಾರು ಏನು ಮಾಡುವುದಕ್ಕಾಗುತ್ತದೆ ನೀವೆಲ್ಲ ಹೇಳಿದ್ದೀರಿ ನನಗೂ ಸ್ವಲ್ಪ ಹೇಳುವುದಕ್ಕೆ ಅವಕಾಶ ಕೊಡಿ. ಉತ್ತರವನ್ನು ಕೊಡುತ್ತೇನೆ. ಹೇಳತಕ್ಕಂಥದ್ದು ಇಷ್ಟೇ. ಹತ್ತು ಲಕ್ಷ ಜನ ಕೆಲಸಮಾಡತಕತ್ಕಂಥದ್ದು ಸತ್ಯ ರಾಷ್ಟ್ರದಲ್ಲಿಯೆ ಹೆಚ್ಚಿನ ಪ್ರಮಾಣದಲ್ಲಿ ಅಗರಬತ್ತಿ ತಯಾರು ಮಾಡತಕ್ಕಂಥದ್ದು ಕರ್ನಾಟಕದಲ್ಲಿ ನಿಜ. ಅದರಲ್ಲಿ ಯಾವುದೇ ಸುಳ್ಳು ಇಲ್ಲ. ಆದರೆ ನಮ್ಮಲ್ಲಿ ತೊಂದರೆ ಏನಾಗಿದೆ ವನ್ಯಧಾಮಗಳಲ್ಲಿ ಬೊಂಬುಗಳನ್ನು ನಾವು ಕಡಿಯುವಂತಿಲ್ಲ. ಎಲ್ಲಿ ಬೇರೆ ಪ್ರದೇಶದಲ್ಲಿ ಬೊಂಬುಗಳು ಇದೆ ಆ ಪ್ರದೇಶದಲ್ಲಿ ಮೂರು ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಸಿಗುತ್ತದೆ. 90 ಪರ್ಸೆಂಟ್ ಬೊಂಬು ಅಸ್ಸಾಂ ರಾಜ್ಯದಿಂದ ಇಲ್ಲಿಗೆ ಬರುತ್ತದೆ, ಹತ್ತು ಪರ್ಸೆಂಟ್ ಮಾತ್ರ ಕರ್ನಾಟಕ ರಾಜ್ಯದಿಂದ ಕೊಡುತ್ತೇವೆ, ಆ ಒಂದು ತೊಂದರೆಯು ನಮಗೆ ಇದೆ. ಅದಕ್ಕೆ ಹತ್ತು ಪರ್ಸೆಂಟ್‌ಗೆ 90 ಪರ್ಸೆಂಟ್ ಕೊಡಿ ಎಂದರೆ, ನೀವು ಹೇಳಿದ್ದು ನಿಜ, ನೀವು ಏನು ಹೇಳಿದಿರಿ ಕೋರ್ಟಿಗೆ ಅರ್ಜಿಯನ್ನು ಸಲ್ಲಿಸಬೇಕು ಎಂದು ಅದನ್ನು ನಾನು ಒಪ್ಪುತ್ತೇನೆ. ನಾವೇನು ಮಾಡಿದೆವು ಕೋರ್ಟಿನಿಂದ ಏನು ಮಧ್ಯಂತರ ತೀರ್ಪನ್ನು ಕೊಟ್ಟರೋ ಅದರಲ್ಲಿ ಎರಡು ತಜ್ಞರ ಸಮಿತಿ ಮಾಡಿ ಎಂದು ಹೇಳಿದ್ದಾರೆ. ನಾವು ಒಂದು ಸಮಿತಿಯನ್ನು ಎ.ಕೆ. ವರ್ಮಾರವರ ಅಧ್ಯಕ್ಷತೆಯಲ್ಲಿ ಮಾಡಿದ್ದೇವೆ ಆಮೇಲೆ ಜಿ.ಎಸ್. ಅಡಿವೆಪ್ಪ ಎಂಬುವರ ಅಧ್ಯಕ್ಷತೆಯಲ್ಲಿ ಎರಡನೆ ತಜ್ಞರ ಸಮಿತಿಯನ್ನು ಮಾಡಿದ್ದೇವೆ. ಹೀಗೆ ಎಂದು ಸಮಿತಿಗಳನ್ನು ಮಾಡಲಾಗಿದ್ದು ಅವರು ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆ, ಇನ್ನೂ ಅಂತಿಮ ವರದಿ ಬರಬೇಕು ಅದು ಬಂದಮೇಲೆ ನಾವು 25ನೇ ತಾರೀಖಿಗೆ ಕೋರ್ಟಿಗೆ ಅರ್ಜಿಯನ್ನು ಸಲ್ಲಿಸುತ್ತೇವೆ. ನಾರು ಏನೇನು ಪ್ರಯತ್ನ ಮಾಡಬೇಕು, ಯಾವ ಯಾರ ರೀತಿ ಸಹಾಯ ಮಾಡಬೇಕೋ ಅದನ್ನು ನಾವೂ ಸಹ ಮಾರುತ್ತೇವೆ ನಿಮ್ಮ ಕಡೆಯಿಂದ ಆ ಸಂಘದವರು ಕೂಡ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ಹೇಳಿದ್ದೇನಷ್ಟೇ, ನಾನು ಬೇರೆ ಇನ್ನೇನೂ ಹೇಳಿಲ್ಲ. ಅದರಲ್ಲಿ ಏನಿದೆ.

ಉಪಾಧ್ಯಕ್ಷರು: ಪವಾರ್‌ರವರ ಇದು ಚರ್ಚೆ ಮಾಡುವಂತದ್ದಲ್ಲ.

ಶ್ರೀ ರಾಮ್‌ದಾಸ್: ಉಪಾಧ್ಯಕ್ಷರೆ, ಇವರ ಬಗ್ಗೆ ಸುಪ್ರಿಂ ಕೋರ್ಟಿನಲ್ಲಿ 25ನೇ ತಾರೀಖು ಕೇಸ್ ಇದ್ದು ಈ ಬಗ್ಗೆ ಸರ್ಕಾರ ಏನು ನಿಲುವನ್ನು ತೆಗೆದುಕೊಂಡಿದೆ ಎಂದು ನಾವು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ತಾವು ದಯವಿಟ್ಟು ಕುಳಿತುಕೊಳ್ಳಿ, ಇದು ಚರ್ಚೆ ಮಾಡುವಂತದ್ದಲ್ಲ. ಈ ಬಗ್ಗೆ ಅವರು ಚರ್ಚೆ ಮಾಡುವುದಕ್ಕೆ ಬೇರೆ ರೂಪದಿಂದ ನೋಟೀಸ್ ಕೊಡಲೇ ಬೇಕಾದರೆ ಅರ್ಧಗಂಟೆಗಳ ಕಾಲ ಅವಕಾಶವನ್ನು ಮಾಡಿಕೊಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರು ಮಾನ್ಯ ಮಂತ್ರಿಗಳ ಗಮನಕ್ಕೆ ಏನು ತರುತ್ತಿದ್ದಾರೆ ಎಂದರೆ ಇದೇ 25ನೇ ತಾರೀಖು ಸುಪ್ರಿಕೋರ್ಟಿನಲ್ಲಿ ಕೇಸ್ ಇದೆ, ಅದಕ್ಕಾಗಿ ನೀವು ಪಾರ್ಟಿ ಎಂದು ಇಂಪ್ಲೀಡ್ ಮಾಡಿಕೊಂಡು, ಮಂತ್ರಿಗಳು ವರ್ಮಾ ಮತ್ತು ಅಡಿವೆಪ್ಪ ರವರ ರಿಪೋರ್ಟ್ ಬಂದ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು

ಅದಕ್ಕೆ ಅವರು ಹೇಳುತ್ತಾರೆ 25ನೇ ತಾರೀಖು ಈ ಸಮಸ್ಯೆ ಗಂಭೀರ ಇದ್ದ ಕಾರಣ, 25ನೇ ತಾರೀಖು ನಾವು ಏನು ಮಾಡಬೇಕು ಎಂಬ ಪ್ರಶ್ನೆ ಇದ್ದಾಗ ನೀವು ನಿಮ್ಮ ವಕೀಲರಿಗೆ ಹೇಳಿ ಪಾರ್ಟಿ ಎಂದು ಇಂಪ್ಲೀಡ್ ಮಾಡಿ ಪುನಃ ಅದು ಫೈನಲ್ ರಿಪೋರ್ಟ್ ಬಂದಾಗ ಏನು ತೀರ್ಮಾನ ಮಾಡಬೇಕೋ ಮಾಡಿ. ಆದರೆ ಈ ತಕ್ಷಣ 25 ತಾರೀಖಿಗೆ ಸರ್ಕಾರದ ವತಿಯಿಂದ ಏನು ಪ್ರಯತ್ನ ಬೇಕು, ಆ ಪ್ರಯತ್ನ ಮಾಡಿ ನಿಮ್ಮ ವಕೀಲರನ್ನು ಅಲ್ಲಿ ಇಡಿ ಎಂಬ ಮಾತನ್ನು ಅವರು ಕೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಈ ಮೇವಾರ ಜನಾಂಗಕ್ಕೆ ಅನ್ಯಾಯವಾಗುತ್ತಿದೆ, ಇಡೀ ರಾಜ್ಯದಲ್ಲಿ ಮೇವಾರ ಜನಾಂಗದವರಿಗೆ ಊಟ, ವಸತಿ ಇಲ್ಲದಂತಾಗುತ್ತದೆ, ಕೆಲಸ ಇಲ್ಲದಂತಾಗುತ್ತದೆ, ಅದನ್ನು ತಮಗೆ ಹೇಳುತ್ತಿದ್ದೇನಷ್ಟೇ.

(4) ನಿಯಮ 351ರ ಮೇರೆಗೆ

ಅರಕಲಗೂಡು ತಾಲ್ಲೂಕು ರಾಮನಾಥಪುರ ಬಸ್ ಡಿಪೋ ಕಾರ್ಯಗಾರ ಮತ್ತು ಕೋಣಸೂರಿನ ಬಸ್ ನಿಲ್ದಾಣ ಪ್ರಾರಂಭ ಮಾಡುವ ಬಗ್ಗೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲ ಗೂಡು): ಮಾನ್ಯ ಉಪಾಧ್ಯಕ್ಷರೆ, ಅರಕಲಗೂಡು ರಾಮನಾಥಪುರದಲ್ಲಿ ನಿರ್ಮಾಣವಾಗಿರುವ ಬಸ್ ಡಿಪೊ ಕಾರ್ಯಗಾರಕ್ಕೆ ಮತ್ತು ಕೋಣನೂರಿನಲ್ಲಿ ನಿರ್ಮಾಣಗೊಂಡಿರುವ ಬಸ್ ನಿಲ್ದಾಣ ಕಟ್ಟಡಕ್ಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿದ್ದು ಯಾವಾಗ? ಮತ್ತು ಮೇಲ್ಕಂಡ ಎರಡು ಕೆಲಸಗಳನ್ನು ಎಂದು ಪ್ರಾರಂಭೋತ್ಸವ ಮಾಡಲಾಗುವುದೆಂದು ಸರ್ಕಾರದಿಂದ ತಿಳಿಯಬಯಸುತ್ತೇನೆ.

ಶ್ರೀ ಪಿ.ಬಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ನಿಯಮ 351ರ ಅಡಿಯಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎ.ಟಿ. ರಾಮಸ್ವಾಮಿಯವರು ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಾರಿಗೆ ಸಚಿವರ ಹೇಳಿಕೆ.

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿ ನಿರ್ಮಾಣವಾಗಿರುವ ಬಸ್ ಡಿಪೋ ನಿರ್ಮಾಣಕ್ಕಾಗಿ ದಿನಾಂಕ 19-10-1994 ರಂದು 20 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಒಪ್ಪಿಗೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ. ಕೆಲಸವು ಪೂರ್ಣಗೊಂಡಿದ್ದು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ಅರಕಲಗೂಡು ತಾಲ್ಲೂಕು ಕೋಣನೂರಿನಲ್ಲಿ ನಿರ್ಮಾಣರಾಗಿರುವ ಬಸ್ ನಿಲ್ದಾಣಕ್ಕೆ ದಿನಾಂಕ 17-9-1992 ರಂದು 25.50 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಒಪ್ಪಿಗೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ. ಕೆಲಸವು ಪೂರ್ಣಗೊಂಡಿದ್ದು ಪ್ರಮಾಣೀಕರ ಉಪಯೋಗಕ್ಕೆ ಬಿಟ್ಟುಕೊಡಲಾಗಿದೆ. ಸದ್ಯದಲ್ಲಿಯೇ ಪ್ರಾರಂಭೋತ್ಸವವನ್ನು ಮಾಡಲಾಗುವುದು.